ನಂಬಿಕೆಯ ನೂಲು

# ಮಳೆಗಾಗಿ ಮಾಯಕ್ಕನ ಮೊರೆ

■ ಬಸು ಬೇವಿನಗಿಡದ

ಕಲೆ: ಎಚ್.ಎಸ್. ಮೋನಪ್ಪ

ಆ ದಿನ ಊರ ಮಧ್ಯಭಾಗದಲ್ಲಿರುವ ದ್ಯಾಮವ್ವದೇವಿಯ ಗುಡಿಗೆ ಮುಂಜಮುಂಜಾನೆಯೆ ಬಂದ ಮಾಯಕ್ಕ ಇನ್ನೂ ಕೆಲವು ಹೆಂಗಸರೊಂದಿಗೆ ತಲೆ ಮೇಲೆ ಕೊಡ ನೀರು ಸುರುವಿಕೊಂಡು, ಹಸಿ ಬಟ್ಟೆಯಲ್ಲಿ ದೇವಿಯನ್ನು ಸ್ತುತಿಸುತ್ತ, ಅವಳೆದುರು ಅಕ್ಕಿ ಹಾಸಿ, ಅದರ ಮೇಲೆ ಐದು ದೀಪಗಳನ್ನು ಮುಡಿಸಿಟ್ಟು, ಮಳೆಗಾಗಿ ಪ್ರಾರ್ಥನೆ ಸಲ್ಲಿಸಿದ ಸುದ್ದಿ ಮಿಂಚಿನ ವೇಗದಲ್ಲಿ ಹಬ್ಬಿತು. ಮೂರು ವರ್ಷದ ಹಿಂದೆ ಊರು ಮುಳುಗುವಷ್ಟು ಮಳೆಯಾಗಿ ಹೇಳಲಾರದಷ್ಟು ತೊಂದರೆ ತಾಪತ್ರಯ ಅನುಭವಿಸಿದ ನೆನಪು ಇನ್ನೂ ಮಾಸಿಲ್ಲ. ಅಷ್ಟರಲ್ಲಿಯೇ ಈ ಭೀಕರ ಕ್ಷಾಮ. ಬರಗಾಲವೆಂಬುದು ಮಲ್ಲೂರಿನ ಜೀವಸತ್ವವನ್ನು ದಿನೇದಿನೇ ಸುಟ್ಟು ಹಾಕುತ್ತಿದೆ. ಜೀವನದ ಆಸೆಯೆನ್ನುವುದು ಕಣ್ಣೆದುರೆ ಕಮರಿ ಹೊರಟಿತ್ತು. ಜನರ ಮುಖಗಳಲ್ಲಿ ಬರೀ ಮ್ಲಾನವತೆಯೇ ತುಂಬಿಕೊಂಡಿದೆ. ಹೇಳಲಾರದ, ಕೇಳಲಾರದ ಕೊರಗು ಕಾಡುತ್ತಿದೆ.



‘ಎಷ್ಟೇ ಕಷ್ಟಕಾರ್ಪಣ್ಯ ಇದ್ರೂ ಮುಂದೆ ಚುಲೋ ಆದೀತು, ದೈವ ಕಣ್ಣು ತೆರೆದೀತು ಅನ್ನೋ ಅಪೇಕ್ಷೆಯಿಂದನ ಬದುಕಿ ಬಾಳಬೇಕಲ್ಲ?’ ಮಾಯಕ್ಕ ಗೆಳತಿಯರಿಗೆ ವಿಶ್ವಾಸ ತುಂಬಿದಳು. ತಾನಿದನ್ನು ಪಂಚಾಯಿತಿಯ ಅಧ್ಯಕ್ಷೆಯಾಗಿ ಹೇಳುತ್ತಿಲ್ಲ, ಒಬ್ಬ ಸಹೋದರಿಯಾಗಿ ಕೋರಿಕೊಳ್ಳುತ್ತಿದ್ದೇನೆ. ಇಂದಲ್ಲ ನಾಳೆ ಮಳೆ ಬಂದೀತು, ಹಸಿರು ಚಿಗುರೀತು, ಹೂವು ಅರಳೀತು ತಾನೆ! ಮಾಯಕ್ಕನ ಮಾತು ಯಾವಾಗಲೂ ಪ್ರೀತಿಪಾತ್ರವೆ. ಅವಳ ಜೊತೆಗಾತಿಯರು ತುಂಬ ಸಂತೋಷಪಟ್ಟರು.

‘ತಾನು ಗುಡಿಗೆ ಬಂದಿರುವುದು ಏನೋ ಚಮತ್ಕಾರ ನಡೆಯುತ್ತದೆಯೆಂದಲ್ಲ ಅಥವಾ ಯಾವುದೋ ಮಂತ್ರದಂಡ ಕೇಳುವುದಕ್ಕಲ್ಲ, ಬದಲಾಗಿ ದೈವದ ಕಾರುಣ್ಯ ಬಯಸಿ ಬಂದಿದ್ದೇನೆ. ಒಳ್ಳೆಯ ಸಮಯ ಬರುವವರೆಗೆ ತನ್ನನ್ನು ಬದುಕಿಸಿಡು, ಬಲಶಾಲಿಯಾಗಿಡು ಎಂದಷ್ಟೆ ತಾನು